

ಕವಿಯ ಚಿತ್ರ ಕೃಪೆ: ಅಣ್ಣಾವರಂ ಶ್ರೀನಿವಾಸ್

ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಇಂಗ್ಲಿಷ್ ಮತ್ತು ಅರ್ಥಶಾಸ್ತ್ರದಲ್ಲಿ ಪದವಿ ಪಡೆದ ಕುರುಪ್‌ಗೆ ಬೆಂಗಳೂರಿನ ನಂಟೂ ಇರುವುದು ಕುತೂಹಲಕರ. ಪತ್ರಕರ್ತರಾಗಿ, ರಂಗಭೂಮಿ ಕಲಾವಿದರಾಗಿ, ಕಾಪಿರೈಟರಾಗಿ, ಸಾಕ್ಷ್ಯಚಿತ್ರ ಮತ್ತು ಜಾಹೀರಾತುಗಳ ಚಿತ್ರನಿರ್ದೇಶಕರಾಗಿ ದುಡಿದ ಕುರುಪ್ ಆಂಧ್ರಪ್ರದೇಶ ಸರಕಾರದ ಸಲಹೆಗಾರ ಕೂಡ ಆಗಿದ್ದರು. ಜರ್ಮನಿಯಲ್ಲಿದ್ದಾಗ ಚಾಕ್ಲೇಟ್ ಮಾಡುವುದನ್ನೂ ಕಲಿತಿದ್ದ ಇವರು ಪುಣೆಯಲ್ಲಿ ಭಾಷಾಧ್ಯಯನದಲ್ಲಿ ಎಂ.ಎ. ಕಲಿಯುವಾಗ ಫಿಲ್ಮ್ ಇನ್‌ಸ್ಟಿಟ್ಯೂಟಿನಲ್ಲಿ ಸಮಯ ಕಳೆದಿದ್ದೇ ಹೆಚ್ಚು ಎನ್ನುತ್ತಾರೆ.

ವಿಲಕ್ಷಣ ಒಂಟಿತನ, ಮೃತ್ಯು ಪ್ರಜ್ಞೆ, ಅಲೌಕಿಕದ ಜೊತೆಗೆ ಅದೇನೋ ನಂಟು—ಇವು ಇವರ ಕಾವ್ಯದ ಸ್ಥಾಯೀ ಭಾವ. ಇವರ ಕವಿತೆಗಳು ಪರಸ್ಪರ ಸಂಬಂಧವೇ ಇಲ್ಲದ ಚಿತ್ರಗಳನ್ನು, ಪ್ರತಿಮೆಗಳನ್ನು, ಸನ್ನಿವೇಶವನ್ನು ಮಾತ್ರವಲ್ಲ, ಕ್ಷೇತ್ರದ ಮಾತುಗಳನ್ನು ಕೂಡ ಒಟ್ಟಿಗಿರಿಸಿ ಕಟ್ಟಿಕೊಡುವ ತೀರ ಹೊಸತನದ ಲೇಪವುಳ್ಳ ಪ್ರಜ್ಞೆ ಓದುಗನಲ್ಲಿ ಉದ್ದೀಪಿಸುವ ಅನುಭವದಲ್ಲಿ ಮೌನದ ಪಾತ್ರವೇ ಹೆಚ್ಚು; ಹೇಳಿಯೂ ಹೇಳದುಳಿಸುವ ಭಾವ ಮಣಭಾರ. ಕಾವ್ಯಕ್ಕೆ ಸಾಧ್ಯ ಎನ್ನುವ, ಎಲ್ಲರಿಗೂ ನೆಲ ತಟ್ಟಿ ಇಟ್ಟ ಶಾಪ ಇದು, ಕವಿಗೆ. ಉದಾಹರಣೆಗೆ ಇದು ಹೊಟ್ಟೆ ತೊಳಸಿದಾಗ ಏನೂ ವಾಂತಿಯಾಗದಿದ್ದರೂ ಮತ್ತೆ ಮತ್ತೆ ಏನೋ ಬರುವಂತೆ ಅನಿಸುವ ವಾಕರಿಕೆ, ಕನಸಲ್ಲಿ ಕಂಡಿದ್ದು ನಿಜವಾಗಿ ನಡೆಯಿತೆನ್ನಿಸುವಂತೆ ಮಾಡುವ ಚಿತ್ತಭ್ರಮೆ, ಎಲ್ಲೋ ಏನೋ ಯೋಚಿಸುವಾಗ ಇನ್ನೇನನ್ನೋ ನಿಶ್ಚಿತವಾಗಿ ಮರೆತು ಬಿಟ್ಟ ಕುರಿತ ಗೊಂದಲ, ಕಾರಣವೇ ಇಲ್ಲದೆ ಉಮ್ಮಳಿಸಿ ಬರುವ ದುಃಖ... ಈ ತರದ್ದು. ಇದನ್ನು ಬೇರೆ ಹೇಗೆ ಹೇಳಲಿ!

ಕೇವಲ '**Unraveling an unspun web**' ಎನ್ನುವುದರಲ್ಲೇ ಒಂದು ಕತೆ ಹೇಳಬಲ್ಲ ಕವಿ ಇಲ್ಲಿ ಆಡುತ್ತಿರುವುದು ಅವಳು ಬರೆಯಬೇಕಿದ್ದ, ಬರೆಯದೇ ಉಳಿಸಿ ಹೋದ ಒಂದು ಕವಿತೆಯ ಬಗ್ಗೆ. ಇಲ್ಲಿ ಬರೆಯದೇ ಇರುವ ಕವಿತೆಯ ಅಮೂರ್ತ ಪರಿಕಲ್ಪನೆ ಹೇಗೆ ಮೈತಳೆದಿದೆ ನೋಡಿ. 'ಅವಳು' ಅದನ್ನು ಬರೆಯಬೇಕಿತ್ತು. ನೆನಪುಗಳಿಂದ ಅದನ್ನು ಮೂರ್ತಗೊಳಿಸಬೇಕಿತ್ತು. ಆದರೆ ಆ ನೆನಪುಗಳು ಬರ್ಬರವಾಗಿವೆ. ನೆನೆದಿದ್ದೇ ಅವು ಮನದ ಕಿಟಕಿಯ ಬಾಗಿಲುಗಳನ್ನು ಫಟಾರೆಂದು ಒದ್ದು ಕುರುಡು ಹಕ್ಕಿಗಳಂತೆ ಹಾರಿ ಹೋಗುತ್ತವೆ. ಆ ಕುರುಡು ಹಕ್ಕಿಗಳ ರಕ್ತ ಕವಿಯ ಕಣ್ಣುಗಳ ಕೆಂಪಾಗಿ ಮೂಡಿದೆ. ಕವಿ ಕತ್ತಲೆಯ ಮೌನದಲ್ಲಿ, ನೆನಪುಗಳ ಭಾರದೊಂದಿಗೆ ಕೂತು ರೋದಿಸುತ್ತಿದ್ದಾನೆ. ವೀಣೆಯ ಮೇಲೆ ಆತುರಾತುರವಾಗಿ ಕೈಯಾಡಿಸುವ ವೈಣಿಕನಂತೆ ಕೈಗೆ ಹತ್ತದ ಒಂದು ರಾಗಕ್ಕಾಗಿ ಆಕೆ ಒದ್ದಾಡುತ್ತಿದ್ದಾಳೆ. ಅವಳಲ್ಲಿ ಅದಮ್ಯ ಮೋಹದ, ಪ್ರೀತಿಯ ಕನಸಿದೆ. ಆದರೆ ದಕ್ಕುವುದಿಲ್ಲ. ಬರೆಯದೇ ಉಳಿದ ಕವಿತೆ ಈಗ ನಿಂದ್ಯ ನೆರಳಿನಲ್ಲಿ ಪಿಶಾಚಿಯಂತೆ ಮುಕ್ತಿಯನ್ನರಸಬೇಕಾಗಿದೆ. ಅದನ್ನು ಬರೆಯಲಾಗದು ಯಾವತ್ತೂ. ಅವಳು ಸತ್ತ ನೆನಪುಗಳನ್ನೇ ಒಂದೊಂದಾಗಿ ಕೂಗಿ ಕರೆದು ಮತ್ತೊಮ್ಮೆ ಕೊಲ್ಲುವ ಹಾಗೆ ಬರೆಯಬೇಕಿದ್ದ ಕವಿತೆಗಳನ್ನು ಬರೆಯಲಾರದೇ ಮತ್ತೊಮ್ಮೆ ಕೊಲ್ಲುತ್ತಿದ್ದಾಳೆ. ಕೊನೆಗೂ ಅವಳಿಗೆ ಕವಿತೆಗಳು ಮಾಡಿದ್ದು